**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯ, ಖಾನಾಪೂರ.**

**ಸಿ.ಸಿ ನಂ.802/2018**

**ಫಿರ್ಯಾದುದಾರರು:**

**ರಾಜೇಶ ಸುಭಾಷ್‌ಚಂದ್ರ ಕೊಟಾರಿ**
ವಯಸ್ಸುಃ 29 ವರ್ಷ
ವಾಸಃ ವಂಡಗಾಂವ ಬೆಳಗಾವಿ

**// ವಿರುದ್ಧ //**

**ಆರೋಪಿ:**

**ಮಂಜುನಾಥ ದೇಮಣ್ಣ ಅಥಾವಾಣಿ**
ವಯಸ್ಸುಃ 42 ವರ್ಷ,
ವಾಸಃ ಶಿವಾಜಿ ನಗರ ಖಾನಾಪೂರ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತನ ಹೇಳಿಕೆ**

ಪ್ರಶ್ನೆ:1) ನೀವು ನ್ಯಾಯಾಲಯದ ಮುಂದೆ ಸಾಕ್ಷಿದಾರರು ನೀಡಿದ ಸಾಕ್ಷ್ಯವನ್ನು ಕೇಳಿದ್ದೀರಾ?

ಉತ್ತರಃ ಕೇಳಿದ್ದೇನೆ.

ಪ್ರಶ್ನೆ:2) ಪ್ರಾಸಾ-1 ಶ್ರೀ. ರಾಜೇಶ ಸುಭಾಷ್‌ಚಂದ್ರ ಕೊಟಾರಿ ಅವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ತಾನು ಫಿರ್ಯಾದುದಾರನಾಗಿದ್ದು, ಆರೋಪಿನಾದ ನೀನು "ಚೌರಾಶಿಮಾತಾ ಇಂಟರಪ್ರೈಸಸ್" ಪಾಲುದಾರಿಕೆ ಸಂಸ್ಥೆಯಲ್ಲಿ ಪಾಲುದಾರರಲ್ಲಿ ಒಬ್ಬರಾಗಿದ್ದು, ಪಾಲುದಾರಿಕೆ ಪಿಪ್ಪಂದದ ನಿಯಮಗಳ ಪ್ರಕಾರ ಪಾಲುದಾರರು ನಿರ್ಧರಿಸಿದಂತೆ ವ್ಯವಹಾರಗಳನ್ನ ನಡೆಸುವುದು, ಹಣವನ್ನು ಸಾಲ ನೀಡುವ ವ್ಯವಹಾರವನ್ನು ನಡೆಸುವುದು, ಮತ್ತು ಪ್ರತಿಯೊಂದು ವಿವರಣೆಯ ಸಾಲಗಳನ್ನು ಉತ್ಪಾನಿಸುವುದು ಅಥವಾ ಮಾತುಕತೆ ನಡೆಸುವುದು ಆಗಿದ್ದು, ಪಾಲುದಾರಿಕೆ ಒಪ್ಪಂದದ ಪ್ರಕಾರ ಎಲ್ಲಾ ಪಾಲುದಾರರು ಲಾಭ ನಷ್ಟ ಗಳನ್ನು ಸಮಾನವಾಗಿ ಹಂಚಿಕೊಳ್ಳಲು ಅರ್ಹರಾಗಿರುತ್ತಾರೆ. ಫಿರ್ಯಾದಿಯು ಒಟ್ಟು 10, 01, 155/- ರೂಗಳನ್ನು ಸಂಸ್ಥೆಗೆ ಡಿಪೋಜಿಟ್ ಮಾಡಿದ್ದು, ಸದರಿ ಡಿಪಾಜೀಟ್ ಮೊತ್ತವನ್ನು 12% ವಾರ್ಷಿಕ ಬಡ್ಡಿ ಸಮೇತ ಅವಧಿ ಮುಗಿದ ನಂತರ ವಾಪಸ್ಸು ನೀಡಬೇಕಾಗಿದ್ದು, ಆದರೆ ಒಪ್ಪಂದದ ಪ್ರಕಾರ "ಚೌರಾಶಿಮಾತಾ ಇಂಟರಪ್ರೈಸಸ್" ಪಾವತಿಸಿರುವುದಿಲ್ಲ ಆದಕಾರಣ ಅದರಲ್ಲಿ ಒಬ್ಬ ಪಾಲುದಾರನಾದ ಆರೋಪಿತನು ಸದರಿ ಪ್ರಾಸಾ. 1 ರವರಿಗೆ ನೀಡಬೇಕಾದ ಹಣದ ಜವ್ವಾರಿಯನ್ನು "ಚೌರಾಶಿಮಾತಾ ಇಂಟರಪ್ರೈಸಸ್" ನ ವತಿಯಿಂದ ತೆಗೆದುಕೋಂಡು ಸದರಿ ಹಣವನ್ನು ಹಿಂದಿರುಗಿಸುವ ಸಲುವಾಗಿ ದಿನಾಂಕಃ 14.12.2017 ರಂದು 9, 86,000/- ಗಳ ಹಣವನ್ನು ಸಾಲದ ಮರು ಪಾವತಿಗಾಗಿ ಸಿಟಿ ಯೂನಿಯನ್ ಬ್ಯಾಂಕ್ ಲೀ ರಾಧಕೃಷ್ಣ ಟೊವರ್ಸ ಬೆಳಗಾವಿ ಬ್ರಾಂಚ್ ನ ಚೆಕ್ ನಂ. 917407 ನ್ನು ಹೊಂದಿರುವ ಚೆಕ್ ನ್ನು ನೀಡಿದ್ದರು, ಎಂದು ನುಡಿದಿರುತ್ತಾರೆ. ಈ ಬಗ್ಗೆ ಏನು ಹೇಳುತ್ತೀರಿ?

ಉತ್ತರಃ ಸುಳ್ಳು.

ಪ್ರಶ್ನೆ:3) ಪ್ರಾಸಾ-1ಶ್ರೀ ರಾಜೇಶ ಸುಭಾಷ್‌ಚಂದ್ರ ಕೊಠಾರಿ ಅವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ, ಸದರಿ ಚೆಕ್ಕನ್ನು ನಗದೀಕರಣಕ್ಕಾಗಿ ದಿನಾಂಕಃ 14.12.2017 ರಂದು ತಮ್ಮನ ಮೂಲಕ ಸಲ್ಲಿಸಿದಾಗ ಖಾತೆಯು ಮುಚ್ಚಿದೆ ಎಂಬ ಹಿಂಬರಹದೊಂದಿಗೆ ದಿಃ 16.12.2017 ರಂದು ವಾಪಸ್ಸು ಆಗಿರುತ್ತದೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ಏನು ಹೇಳುತ್ತೀರಿ?

ಉತ್ತರಃ ಹ-ಳ್ಳ

ಪ್ರಶ್ನೆ:4) ಪ್ರಾಸಾ-1ಶ್ರೀ ರಾಜೇಶ ಸುಭಾಷ್‌ಚಂದ್ರ ಕೊಠಾರಿ ಅವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ, ನಂತರ ಸದರಿ ಚೆಕ್ಕಿನ ಮೊತ್ತವನ್ನು ಪಾವತಿಸುವಂತೆ ಕೋರಿ ದಿನಾಂಕಃ 10.01.2018 ರಂದು ತಮ್ಮ ವಕೀಲರ ಮೂಲಕ ನೋಟಿಸು ಕೊಟ್ಟಿದ್ದು ಅದು ಜಾರಿಯಾದ 15 ದಿನಗಳ ಒಳಗೆ ಸದರಿ ಚೆಕ್ಕಿನ ಮೊತ್ತವನ್ನು ಪಾವತಿಸಿಲ್ಲ ಮತ್ತು ಆ ನೋಟಿಸಿಗೆ ಯಾ ವುದೇ ಉತ್ತರವನ್ನು ನೀಡಿಲ್ಲ. ನೀವು ಉದ್ದೇಶಪೂರ್ವಕವಾಗಿ ತನಗೆ ಮೋಸ ಮಾಡಲು ಸದರಿ ಚೆಕ್ಕನ್ನು ನೀಡಿದ್ದಿರಿ ಎಂದು ನುಡಿದಿರುತ್ತಾರೆ. ಈ ಬಗ್ಗೆ ಏನು ಹೇಳುತ್ತೀರಿ?

ಉತ್ತರಃ ಹಳ್ಳ

**ಪ್ರಶ್ನೆ:5) ಈ ಕೇಸಿನಲ್ಲಿ ನಿಮಗೇನಾದರೂ ಹೇಳುವುದಿದೆಯಾ?**

ಉತ್ತರಃ ಇಲ್ಲ

**ಪ್ರಶ್ನೆ:6) ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿಯ ವಿಚಾರಣೆಯನ್ನು ಮಾಡಿಸುತ್ತೀರಾ?**

ಉತ್ತರಃ ಇಲ್ಲ.

**(ಮೇಲೆ ಹೇಳಲಾದ ಪ್ರಶ್ನೆಗಳನ್ನು ಆರೋಪಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ, ಅವರು ತಿಳಿದುಕೊಂಡು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ಧೃಡೀಕರಿಸಲಾಗಿದೆ.)**

15/10/25.

**(ವಿರೇಶ ಹಿರೇಮಠ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

ಖಾನಾಪೂರ
ದಿನಾಂಕಃ**15.10.2025**